

ವಿಜಯವಾಣಿ ರೈತ ಮಿತ್ರ

■ **ಹಿಪ್ಪುನೇರಳೆಯಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಬೂದಿ ರೋಗ ನಿಯಂತ್ರಿಸುವುದು ಹೇಗೆ?**

| ನಾರಾಯಣಸ್ವಾಮಿ ಶಿಡ್ಲಘಟ್ಟ

ಉತ್ತರ: ಈ ರೋಗವು ಅಕ್ಟೋಬರ್‌ನಿಂದ ಜನವರಿವರೆಗೆ ಹೆಚ್ಚಾಗಿ ಕಂಡುಬರಲಿದ್ದು, ಉಷ್ಣಾಂಶ 20-24 ಡಿಗ್ರಿ ಸೆಂ., ನೆರಳು, ಒತ್ತಾಗಿ ಬೆಳೆದ ಗಿಡಗಳಲ್ಲಿ, ಅಗತ್ಯಕ್ಕಿಂತ ಹೆಚ್ಚು ಸಾರಜನಕ ರಸಗೊಬ್ಬರದ ಬಳಕೆ ಮತ್ತು ಅಧಿಕ ತೇವಾಂಶ ರೋಗಕ್ಕೆ ಪೂರಕವಾಗಿರುತ್ತದೆ.

ರೋಗದ ಲಕ್ಷಣಗಳು: ಎಲೆಗಳ ತಳಭಾಗದಲ್ಲಿ ಬೂದಿ ಸಿಂಪಡಿಸಿದಂತೆ ಮಚ್ಚೆಗಳು ಕಾಣಿಸಿಕೊಂಡು ಕ್ರಮೇಣ ತಳಭಾಗವನ್ನೆಲ್ಲ ಆವರಿಸಿಕೊಳ್ಳುತ್ತವೆ. ಮಚ್ಚೆಗಳಿರುವಲ್ಲಿ ಎಲೆಯ ಮೇಲ್ಭಾಗ ಹಳದಿ ಬಣ್ಣಕ್ಕೆ ತಿರುಗಿ ರೋಗಪೀಡಿತ ಎಲೆಗಳನ್ನು ಹಿಸುಕಿದಾಗ ಸುಲಭವಾಗಿ ಈ ಎಲೆಗಳು ಪುಡಿಯಾಗುತ್ತವೆ.

ನಿರ್ವಹಣೆ: ತೇವಾಂಶ ಮತ್ತು ನೆರಳನ್ನು ಕಡಿಮೆಗೊಳಿಸುವುದರಿಂದ ರೋಗದ ತೀವ್ರತೆ ಕಡಿಮೆಗೊಳಿಸಬಹುದು, ತೋಟದಲ್ಲಿ ಗಾಳಿಯಾಡಲು ಅನುಕೂಲ ಮಾಡಿಕೊಡುವುದು, ನೆಲದ ಮೇಲೆ ಬಿದ್ದಿರುವ ಬಲಹೀನ ರೆಂಬೆ ಮತ್ತು ಕಳೆಗಳನ್ನು ನಿಯಂತ್ರಿಸುವುದರಿಂದ ತೋಟದ ತೇವಾಂಶವನ್ನು ಹತೋಟಿಯಲ್ಲಿಡಬಹುದು, ಶೇ.0.1 ರ ಕಾರ್ಬೆಂಡೈಜಿಮ್ 50 ಡಬ್ಲ್ಯು.ಪಿ. ಅಥವಾ ಬೆನಾಮಿಲ್ 50 ಡಬ್ಲ್ಯು.ಪಿ. ಅಥವಾ 0.1-0.2 ರ ಕ್ಯಾಪ್ಟಾನ್ 50 ಡಬ್ಲ್ಯು.ಪಿ. ಅಥವಾ 0.05 ರ ಡೈನೋಕ್ಯಾಪ್ 48 ಇ.ಸಿ. ಶಿಲೀಂಧ್ರನಾಶಕವನ್ನು ಸಿಂಪಡಿಸುವುದು. ಅವಶ್ಯವಿದ್ದಲ್ಲಿ 15 ದಿನಗಳ ನಂತರ ಮತ್ತೊಮ್ಮೆ ಸಿಂಪಡಿಸಬಹುದು.

ಸೂಚನೆ: ರಾಸಾಯನಿಕವನ್ನು ಸಿಂಪಡಿಸಿದ 10-15 ದಿನಗಳ ನಂತರ ಹುಳುಗಳಿಗೆ ಎಲೆಗಳನ್ನು ಆಹಾರವಾಗಿ ನೀಡಬಹುದು.

| ಬಿ. ಪ್ರಿಯಾಂಕ ಸಸ್ಯರೋಗ ತಜ್ಞರು

■ **ತರಕಾರಿ ಬೆಳೆಗಳಲ್ಲಿ ಪೀಡೆ ನಿರ್ವಹಣೆಗೆ ರಾಸಾಯನಿಕ ಸಿಂಪಡಣೆ ಬದಲು ಪರ್ಯಾಯ ವಿಧಾನಗಳನ್ನು ತಿಳಿಸಿ?**

| ಚಂದ್ರಕುಮಾರ್ ಲಕ್ಷ್ಮೀಸಾಗರ, ಆನೇಕಲ್

ಉತ್ತರ: ತರಕಾರಿ ಬೆಳೆಗಳಲ್ಲಿ ವಿವಿಧ ಕೀಟ ಮತ್ತು ರೋಗಗಳ ಹಾವಳಿ/ಹಾನಿಯಿಂದ ಇಳುವರಿಯಲ್ಲಿ ಗಣನೀಯ ನಷ್ಟವಾಗುತ್ತದೆ. ಅನೇಕ ಜನ ರೈತರು ಕೀಟ ಮತ್ತು ರೋಗದ ನಿರ್ವಹಣೆಗಾಗಿ ರಾಸಾಯನಿಕಗಳನ್ನು ಹೆಚ್ಚಾಗಿ ಸಿಂಪಡಣೆ ಮಾಡುವುದರಿಂದ ಖರ್ಚು ಹೆಚ್ಚಾಗುವುದಲ್ಲದೆ, ತಮ್ಮ ಹಾಗೂ ಗ್ರಾಹಕರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವುದು. ಆದ್ದರಿಂದ ರೈತರು ಪರ್ಯಾಯ ವಿಧಾನಗಳನ್ನು ಅನುಸರಿಸುವುದು ಅತ್ಯವಶ್ಯಕ.

- ಒಂದೇ ಬೆಳೆಯನ್ನು ಅಥವಾ ಒಂದೇ ಕುಟುಂಬಕ್ಕೆ ಸೇರಿದ ಬೆಳೆಗಳನ್ನು ಒಂದೇ ಭೂಮಿಯಲ್ಲಿ ಪದೇಪದೆ ಬೆಳೆಯದೆ ಬೇರೆ ಬೆಳೆ ಬೆಳೆಯುವುದು.
- ಜೈವಿಕ ಗೊಬ್ಬರಗಳಾದ ಟ್ರೈಕೊಡರ್ಮ ಹಾಗೂ ಸೂಡೋಮೋನಾಸ್‌ಗಳನ್ನು ಕೊಟ್ಟಿಗೆ/ಗೊಬ್ಬರದೊಂದಿಗೆ ಸೇರಿಸಿ ಬಳಸುವುದರಿಂದ ಮಣ್ಣಿನಿಂದ ಹಾಗೂ ಬೀಜದಿಂದ ಹರಡುವ ಅನೇಕ ರೋಗಗಳನ್ನು ಹತೋಟಿ ಮಾಡಬಹುದು.
- ತಡೆ ಬೆಳೆಗಳನ್ನು (ಉದಾ: ಜೋಳ, ಸಜ್ಜೆ) ಪ್ರಮುಖ ಬೆಳೆಯ ನಾಲ್ಕು ದಿಕ್ಕಿನ ಸುತ್ತಲೂ ಬೆಳೆಯುವುದರಿಂದ ಹಾನಿಕಾರಕ ಕೀಟ ಮತ್ತು ರೋಗಾಣುಗಳನ್ನು ಪ್ರಮುಖ ಬೆಳೆಗೆ ಹರಡದಂತೆ ತಡೆಯಬಹುದು.
- ಆಕರ್ಷಕ ಬೆಳೆ (ಬೋನಿನ ಬೆಳೆ)ಯನ್ನು ಮುಖ್ಯ ಬೆಳೆಯ ಜತೆ ಬೆಳೆಯುವುದರಿಂದ ಕೀಟಗಳನ್ನು ಆಕರ್ಷಕ ಬೆಳೆ ಆಕರ್ಷಿಸಿ ಹತೋಟಿ ಮಾಡಬಹುದು. ಉದಾ: ಟೊಮ್ಯಾಟೋ ಬೆಳೆಯಲ್ಲಿ ಚೆಂಡು ಹೂವನ್ನು ಪ್ರತಿ 16 ಸಾಲಿಗೆ 1 ಸಾಲು ಬೆಳೆಯುವುದು. ಕೋಸಿನಲ್ಲಿ ಸಾಸುವೆಯನ್ನು ಪ್ರತಿ 25 ಸಾಲಿಗೆ 2 ಸಾಲು ಬಿತ್ತನೆ ಮಾಡುವುದು.
- ಹಳದಿ ಬಣ್ಣದ ಅಂಟು ಕಾರ್ಡ್‌ಗಳನ್ನು ತಾಕುಗಳಲ್ಲಿ ನೇತು ಹಾಕುವುದರಿಂದ ರಸ ಹೀರುವ ಕೀಟಗಳನ್ನು ಆಕರ್ಷಿಸಿ ಕೀಟ ಹಾಗೂ ರೋಗಗಳನ್ನು ತಡೆಗಟ್ಟಬಹುದು.
- ಮೋಹಕ ಬಲೆಗಳನ್ನು (ಕೃತಕವಾಗಿ ತಯಾರಿಸಲ್ಪಟ್ಟ ಹೆಣ್ಣು ಕೀಟಗಳ ಪೆರಮೋನ್) ಬಳಸಿ ಗಂಡು ಕೀಟಗಳನ್ನು ಆಕರ್ಷಿಸಿ ಕೀಟಗಳ ಸಂತತಿ ಕುಂಠಿತಗೊಳಿಸುವುದು.
- ಬೇವಿನ ಎಣ್ಣೆ, ಬೇವಿನ ಕಷಾಯ, ಬೇವಿನ/ಹೊಂಗೆ ಸೋಪುಗಳನ್ನು ಸಿಂಪಡಣೆ ಮಾಡುವುದು.

| ಡಾ. ಎಂ. ಶಾಲಿನಿ ತೋಟಗಾರಿಕೆ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

11-10-2021
Vv Pg 13

ರಾಜ್ಯ ಸರ್ಕಾರದ ಬೇಡಿಕೆಗೆ ಸಕಾರಾತ್ಮಕ ಸ್ಪಂದನೆ | ಹಂಗಾಮು ಬದಲಾವಣೆ, ಬೆಲೆ ಏರಿಕೆ ಬಗ್ಗೆ ಆಯೋಗ ಅಧ್ಯಯನ

ಉತ್ತರ ಕರ್ನಾಟಕದ ಜೋಳಕ್ಕೆ ಕೇಂದ್ರದ ಪ್ರಾಧಾನ್ಯತೆ ನಿರೀಕ್ಷೆ

■ ಮೃತ್ಯುಂಜಯ ಕಪಗಲ್ ಬೆಂಗಳೂರು

ಕಲ್ಯಾಣ ಕರ್ನಾಟಕ ಜಿಲ್ಲೆಗಳು ಒಳಗೊಂಡು ಉತ್ತರ ಕರ್ನಾಟಕದ ಪ್ರಮುಖ ಆಹಾರ ಬೆಳೆಗಳಲ್ಲಿ ಒಂದಾದ ಬಿಳಿಜೋಳಕ್ಕೆ ಪ್ರಾಧಾನ್ಯತೆ ಸಿಗುವ ಆಶಾಭಾವನೆ ಗರಿಗೆದರಿದೆ. ಬೇಡಿಕೆಗೆ ತಕ್ಕಷ್ಟು ಜೋಳ ಉತ್ಪಾದನೆಗೆ ಪ್ರೋತ್ಸಾಹಿಸಬೇಕೆಂಬ ರಾಜ್ಯದ ಬೇಡಿಕೆಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ, ಮುಂದಿನ ಹಂತದ ಪ್ರಕ್ರಿಯೆಗೆ ಅನುವು ಮಾಡಿಕೊಟ್ಟಿದೆ.

ಸ್ಥಳೀಯ ಆಹಾರ ಪದ್ಧತಿಗೆ ಪೋಷಣೆ, ಅಪೌಷ್ಟಿಕತೆ ನಿವಾರಣೆ ಜತೆಗೆ ಜೋಳ ಬೆಳೆಯುವ ರೈತರಿಗೆ ನೆರವಾಗುವ ಉದ್ದೇಶದಿಂದ ರಾಜ್ಯ ಸರ್ಕಾರ ಈ ಪ್ರಸ್ತಾವನೆ ಸಲ್ಲಿಸಿತ್ತು. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಬಿಳಿ ಜೋಳವನ್ನು ಮುಂಗಾರು ಹಂಗಾಮಿಗೆ ಸೇರಿಸಿ, ಪ್ರತಿ ಕ್ವಿಂಟಾಲ್‌ಗೆ 4,000 ರೂ. ಬೆಂಬಲ ಬೆಲೆ ನಿಗದಿಪಡಿಸಬೇಕು ಎನ್ನುವುದು ಪ್ರಸ್ತಾವನೆಯ ತಿರುಳು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆಗೆ ಚರ್ಚಿಸಿ ಒಪ್ಪಿಗೆ ಪಡೆದು, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಉಮೇಶ ಕತ್ತಿ ನೇತೃತ್ವದ ನಿಯೋಗ ದೆಹಲಿಗೆ ತೆರಳಿ ಮನವಿ ಸಲ್ಲಿಸಿತ್ತು.

ಆಯೋಗ ಅಧ್ಯಯನ: ನಿಯೋಗದ ಜತೆಗೆ ರಾಜ್ಯದವರೇ ಆದ ಕೇಂದ್ರ ಕೃಷಿ, ರೈತರ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಮಾತುಕತೆ ನಡೆಸಿ, ನೀಡಿದ ಸೂಚನೆಯಂತೆ ಕೇಂದ್ರ ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಅಧ್ಯಯನ ನಡೆಸಿದೆ. ಆಯೋಗ ಸಲ್ಲಿಸುವ ಶಿಫಾರಸು ಸಹಿತ ವರದಿಯನ್ನು ಆರ್ಥಿಕ ವ್ಯವಹಾರಗಳ ಕೇಂದ್ರ ಸಚಿವ ಸಂಪುಟ ಸಮಿತಿ ಹಾಗೂ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿ, ಅಧಿಕೃತ ಆದೇಶ ಹೊರಡಿಸುತ್ತದೆ. ಹೀಗಾಗಿ ಆಯೋಗದ ಅಧ್ಯಯನ ಪ್ರಮುಖ ಘಟ್ಟವೆಂದು ಮೂಲಗಳು ತಿಳಿಸಿವೆ.

ಏನೆಲ್ಲ ಲಾಭ ?

ಮುಂಗಾರು ಹಿಂಗಾಮಿನಲ್ಲಿ 80,000 ಹೆಕ್ಟೇರ್ ಪ್ರದೇಶದಲ್ಲಿ ಹೈಬ್ರಿಡ್ ಮತ್ತು ಬಿಳಿಜೋಳ ಬೆಳೆದರೆ, ಹಿಂಗಾರು ಹಂಗಾಮಿನಲ್ಲಿ 9 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ. ಕೇಂದ್ರ ಗ್ರೀನ್ ಸಿಗ್ನಲ್ ನೀಡಿದರೆ, ಹೆಚ್ಚಿನ ಪ್ರಮಾಣದಲ್ಲಿ ಪಡಿತರಕ್ಕೆ ಲಭ್ಯವಾಗಲಿದ್ದು, ರೈತರಿಗೂ ನೆರವಾಗಲಿದೆ ಎಂದು ಇಲಾಖೆ ಮೂಲಗಳು ವಿಶ್ಲೇಷಿಸಿವೆ.

ಪಡಿತರಕ್ಕೆ ಕೊರತೆ: ಪ್ರತಿ ಬಿಪಿಎಲ್ ಕಾರ್ಡ್‌ಗೆ ತಲಾ ಎರಡು ಕೆ.ಜಿ. ಅಕ್ಕಿ, ಮೂರು ಕೆಜಿ ರಾಗಿ ಅಥವಾ ಜೋಳದ ವಿತರಣೆ ವ್ಯವಸ್ಥೆಯಾಗಿದ್ದರೂ ಬೇಡಿಕೆಯಷ್ಟು ಜೋಳ ಸಿಕ್ಕಿಲ್ಲ. ಬೆಂಬಲ ಬೆಲೆ ಯೋಜನೆಯಡಿ ಐದು ಲಕ್ಷ ಕ್ವಿಂಟಾಲ್ ರಾಗಿ, 80,000 ಕ್ವಿಂಟಾಲ್ ಜೋಳ ಖರೀದಿ ಮಾಡಲಾಗಿತ್ತು. ರಾಗಿ ವಿತರಣೆ ಮುಂದುವರಿದಿದ್ದು, ಜೋಳ ಖಾಲಿಯಾಗಿದ್ದರಿಂದ ಐದು ಕೆಜಿ ಅಕ್ಕಿ ನೀಡಲಾಗುತ್ತಿದೆ. ಮುಕ್ತ ಮಾರುಕಟ್ಟೆ ದರಕ್ಕೆ ಹೋಲಿಸಿದರೆ, ಕ್ವಿಂಟಾಲ್ ಹೈಬ್ರಿಡ್ ಜೋಳಕ್ಕೆ 2,738 ರೂ., ಬಿಳಿಜೋಳಕ್ಕೆ 2,758 ರೂ. ನಿಗದಿತ ಬೆಂಬಲ ಬೆಲೆ ಕಡಿಮೆ ಎಂದು ರೈತರು ಹಿಂಜರಿದಿದ್ದು, ಉತ್ಪಾದನೆ ಪ್ರದೇಶ ಕುಸಿತವೂ ಕೊರತೆಗೆ ಕಾರಣ.

ಆಹಾರದಲ್ಲಿ ಹಾಸುಹೊಕ್ಕು: ಬೆಳಗಾವಿಯಿಂದ ಬೀದರ್‌ವರೆಗೆ ಜೋಳ ಮುಖ್ಯ ಬೆಳೆಯಾಗಿದೆ. ಜತೆಗೆ ಮಧ್ಯ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಆಂಶಿಕವಾಗಿ ಬೆಳೆಯುತ್ತಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಹವಾಮಾನ ವೈಪರೀತ್ಯ, ಬೆಳೆ ಏರಿಳಿತದಿಂದ ಬಿತ್ತನೆ ಪ್ರದೇಶ ಇಳಿಮುಖದ ಹಾದಿ ಹಿಡಿದಿದ್ದು, ಕಬ್ಬು, ಹತ್ತಿ ಇನ್ನಿತರ ವಾಣಿಜ್ಯ ಬೆಳೆಗಳತ್ತ ರೈತರು ವಾಲಿರುವುದು ಮತ್ತೊಂದು ಕಾರಣ. ಜೋಳದಲ್ಲಿ ಕಬ್ಬಿಣ, ಕ್ಯಾಲ್ಸಿಯಂ, ನಾರು, ಪಿಷ್ಟ ಪೋಷಕಾಂಶಗಳ ಜತೆಗೆ ಬಿ ಜೀವಸತ್ವ ಪೂರೈಸುವ ರೈಬೋಫ್ಲೋವಿನ್ ಫಿನೋಲಿಕ್ ಆಸಿಡ್, ಟ್ಯಾನಿನ್ಸ್ ಮುಂತಾದ ಅಂಶಗಳಿವೆ. ಜೋಳ ಉತ್ಪಾದನೆ ಹೆಚ್ಚಳಕ್ಕೆ ಒತ್ತು ನೀಡಬೇಕಾಗಿದೆ ಎಂದು ಆಹಾರ ತಜ್ಞರು ಹೇಳುತ್ತಾರೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹಿಂಗಾರು ಹಂಗಾಮಿಗೆ ಜೋಳ ಸೇರ್ಪಡೆ, ಬೆಲೆ ಏರಿಕೆ ಕುರಿತ ರಾಜ್ಯದ ಪ್ರಸ್ತಾವನೆಯು ಕೇಂದ್ರ ಕೃಷಿ ವೆಚ್ಚಗಳು ಮತ್ತು ಬೆಲೆಗಳು ಆಯೋಗದ ಮುಂದಿದ್ದು, ಅಧ್ಯಯನ ನಡೆಸಿದ ನಂತರ ವರದಿ ಸಲ್ಲಿಸಲಿದೆ.

| ಶೋಭಾ ಕರಂದ್ಲಾಜೆ
ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ

11-10-2021 Vv Pg 08

11-10-2021 Kp Pg 11

ತೆಂಗಿನ ತದ್ರೂಪು ಸೃಷ್ಟಿ ಯತ್ನ ಯಶಸ್ವಿ

ಮೊದಲ ಬಾರಿ ಬೆಲ್ಜಿಯಂನ ಸಾಧನೆ | ಹಳದಿ ರೋಗ ಸಮಸ್ಯೆಗೆ ಪರಿಹಾರ?

ತಿರುವನಂತಪುರಂ: ಜಗತ್ತಿನಲ್ಲಿ ಮೊದಲ ಬಾರಿ ತೆಂಗಿನ ಮರದ ತದ್ರೂಪು ಸೃಷ್ಟಿಸುವಲ್ಲಿ ಬೆಲ್ಜಿಯಂನ ಜೀವ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಕಸಿಯ ಮೂಲಕ ತೆಂಗಿನ ತದ್ರೂಪು ಸೃಷ್ಟಿಸುವುದು ಹಾಗೂ ವಿವಿಧ ತೆಂಗಿನ ತಳಿಗಳನ್ನು ಸಂರಕ್ಷಿಸಿಡುವ ವಿಧಾನ ಇದಾಗಿದ್ದು, ತೆಂಗಿನ ಬೆಳೆಗಾರರು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಇದರಲ್ಲಿ ಪರಿಹಾರ ಅಡಗಿದೆ ಎಂದು ವಿಜ್ಞಾನಿಗಳು ಹೇಳಿಕೊಂಡಿದ್ದಾರೆ.

ಬೆಲ್ಜಿಯಂನ ಕೆ.ಯು.ಲೀವನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ತದ್ರೂಪು ಸೃಷ್ಟಿಯ ಮೂಲಕ ತೆಂಗಿನ ಸಸಿಗಳು ಬೇಗ ಬೆಳೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇದೇ ವೇಳೆ ತೆಂಗಿನ ವಂಶವಾಹಿ ಗುಣಗಳನ್ನು ದೀರ್ಘಾವಧಿಗೆ ಸಂರಕ್ಷಿಸಿಡುವ ವಿಧಾನವನ್ನೂ ಕಂಡುಹಿಡಿದಿದ್ದು, ಇದರಿಂದ ಭಾರತ ಮುಂತಾದ ದೇಶಗಳಲ್ಲಿ ತೆಂಗು ಬೆಳೆಗಾರರು ಎದುರಿಸುತ್ತಿರುವ ಹಳದಿ ರೋಗ, ಹವಾಮಾನ ಬದಲಾವಣೆ, ಸಮುದ್ರ ಮಟ್ಟದ ಏರುವಿಕೆ ಹಾಗೂ ತೆಂಗಿನ ತೋಟಗಳು ಹಳೆಯದಾಗಿರುವುದು ಮುಂತಾದ ಸಮಸ್ಯೆಗೆ ಪರಿಹಾರ ಲಭಿಸಲಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ವಿಜ್ಞಾನಿಗಳು ಮಾಡಿದ್ದೇನು?

ತೆಂಗಿನ ಬೀಜವು ಒಂದೇ ಮೊಳಕೆಯೊಡೆದು, ರೆಂಬೆಗಳಿಲ್ಲದೆ ನೇರವಾಗಿ ಬೆಳೆಯುವುದರಿಂದ ಅದರ ತದ್ರೂಪು ಸೃಷ್ಟಿ ಸಾಧ್ಯವಿರಲಿಲ್ಲ. ಹೊಸ ಕಸಿ ವಿಧಾನದ ಮೂಲಕ ಅದನ್ನು ವಿಜ್ಞಾನಿಗಳು ಈಗ ಮಾಡಿದ್ದಾರೆ. ಇದರಿಂದಾಗಿ ಒಂದೇ ಬೀಜದಿಂದ ಹಲವು ತೆಂಗಿನ ಸಸಿಗಳನ್ನು ತಯಾರಿಸಬಹುದು. ಇದರಿಂದ ರೈತರಿಗೆ ತೆಂಗಿನ ತೋಟ ಮಾಡುವ ಖರ್ಚು ಕಡಿಮೆಯಾಗುತ್ತದೆ ಎಂದು ಹೇಳಲಾಗಿದೆ. ಆದರೆ, ಈ ತಂತ್ರಜ್ಞಾನ ಜನಸಾಮಾನ್ಯರ ಬಳಕೆಗೆ ಯಾವಾಗ ಸಿಗುತ್ತದೆ ಎಂಬ ಬಗ್ಗೆ ವಿಜ್ಞಾನಿಗಳು ಮಾಹಿತಿ ನೀಡಿಲ್ಲ.

ತಳಿ ಅಭಿವೃದ್ಧಿ | ಗುಬ್ಬಿ ರೈತನ ಜೊತೆ ಐಐಎಚ್‌ಆರ್ ಒಪ್ಪಂದ | ತಲಾ 150 ರು.ನಂತೆ ವರ್ಷಕ್ಕೆ ಐಐಎಚ್‌ಆರ್‌ನಿಂದ 20,000 ಗಿಡಗಳ ಮಾರಾಟ

ತುಮಕೂರಿನ 'ಸಿದ್ದು' ಹಲಸಿಗೆ ಕರಾವಳಿಯಲ್ಲಿ ಕಸಿ

ಕರಾವಳಿಯ ಕಸಿ ತಜ್ಞ ಗುರುರಾಜ್‌ರಿಂದ ಕಸಿ ಗಿಡಗಳ ಸಿದ್ಧತೆ | ಗುಬ್ಬಿ ರೈತನಿಗೆ ಹಣ ಕೊಟ್ಟು ಟೊಂಗೆ ಖರೀದಿ

• **ರಾಘವೇಂದ್ರ ಅಗ್ನಿಹೋತ್ರಿ**
ಕನ್ನಡಪ್ರಭ ವಾರ್ತೆ ಮಂಗಳೂರು

ರೈತರೊಬ್ಬರ ಹೆಸರಿನಲ್ಲಿ ಮನ್ನಣೆ ಪಡೆದು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ತುಮಕೂರು ಜಿಲ್ಲೆಯ 'ಸಿದ್ದು' ಹಲಸಿನ ಹಣ್ಣಿನ ಗಿಡಗಳು ಉತ್ಪಾದನೆ ಆಗುತ್ತಿರುವುದು ಕರಾವಳಿಯಲ್ಲಿ.

ಸ್ವಾದಿಷ್ಟ ಮತ್ತು ಕೆಂಬಣ್ಣದ ಆಕರ್ಷಕ ಸೊಳೆಗಳಿಂದಲೇ ತುಮಕೂರುಜಿಲ್ಲೆಗುಬ್ಬಿತಾಲೂಕಿನಸೀಗೆನಹಳ್ಳಿಯಲ್ಲಿರುವ 'ಸಿದ್ದು' ಹಲಸಿನ ಮರ ದೇಶಾದ್ಯಂತ ಜನಮಾನಸದಲ್ಲಿ ಸ್ಥಾನ ಪಡೆದಿದೆ. ಈ ಹಲಸಿನ ಮರದ ಟೊಂಗೆಗಳಿಂದ ಕರಾವಳಿಯ ಖ್ಯಾತ ಕಸಿತಜ್ಞ ಗುರುರಾಜ್ ಬಾಳ್ತಿಲ್ಲಾಯ ಅವರು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್)ಗಾಗಿ ಕಸಿಗಿಡಗಳನ್ನು ಸಿದ್ಧ ಮಾಡಿಕೊಡುತ್ತಿದ್ದಾರೆ. ಅಪರೂಪದಲ್ಲಿ ಅಪರೂಪವಾಗಿರುವ ಈ ತಳಿಯ ಗಿಡಗಳನ್ನು ಐಐಎಚ್ ಆರ್‌ಗಾಗಿ ಸಿದ್ಧಪಡಿಸಿ ನೀಡುತ್ತಿದ್ದು, ಐಐಎಚ್‌ಆರ್‌ನಿಂದ ರೈತರಿಗೆ ಮಾರಾಟವಾಗುತ್ತಿದೆ.

ಮಲೆನಾಡು, ಕರಾವಳಿಗೆ ಸೂಕ್ತವಲ್ಲ

ತುಮಕೂರಿನ ಈ ಅಪರೂಪದ ತಳಿಯನ್ನು ಗುರುತಿಸಿ ಐಐಎಚ್‌ಆರ್ 2017ರಲ್ಲಿ ಮಾನ್ಯತೆ ನೀಡಿದೆ. ರೈತರ ಹೆಸರಲ್ಲೇ ಮಾನ್ಯತೆ ಪಡೆದ ದೇಶದ ಮೊದಲ ಹಲಸಿನ ಮರ ಎಂಬ ಹೆಗ್ಗಳಿಕೆಗೆ ಈ ತಳಿ ಪಾತ್ರವಾಗಿದೆ. ಬಯಲುಸೀಮೆಯ ಒಣ ಹವೆಯ ಪ್ರದೇಶಗಳಲ್ಲಿ ಈ ಹಲಸು ಹೇಳಿ ಮಾಡಿಸಿದ ತಳಿಯಾಗಿದೆ. ಆದರೆ ಕರಾವಳಿ ಮತ್ತು ಮಲೆನಾಡಿಗೆ ಈ ತಳಿ ಸೂಕ್ತವಲ್ಲ ಎಂಬುದು ಕಸಿ ತಜ್ಞ ಗುರುರಾಜ ಅಭಿಪ್ರಾಯ.

ಐಐಎಚ್‌ಆರ್ ಜೊತೆ ಒಪ್ಪಂದ: ಸಿದ್ದು ತಳಿಗೆ ಸರ್ಕಾರದ ಮಾನ್ಯತೆ ಲಭಿಸಿದ ಬಳಿಕ ಮರದ ಮಾಲೀಕರ ಜೊತೆ ಐಐಎಚ್‌ಆರ್ ಒಪ್ಪಂದ ಮಾಡಿಕೊಂಡಿದೆ. ಒಪ್ಪಂದದ ಪ್ರಕಾರ, ನಿಗದಿಪಡಿಸಿದ ಗೌರವಧನ ನೀಡಿ ಮರದ ಟೊಂಗೆಗಳನ್ನು ಖರೀದಿಸಿ, ಅದರ ಕಸಿ ಗಿಡಗಳನ್ನು ಐಐಎಚ್‌ಆರ್‌ನವರು ಮಾರಾಟ ಮಾಡುತ್ತಾರೆ. ಮರದ ಮಾಲೀಕರು ಸ್ವತಃ ತಾವೇ ಗಿಡ ತಯಾರಿಸಬಹುದು. ಆದರೆ, ಬೇರೆ ಯಾವುದೇ ಖಾಸಗಿ ನರ್ಸರಿಯರಿಗೆ ಮರದ ರೆಂಬೆ-ಕೊಂಬೆಗಳನ್ನು ಮಾರುವಂತಿಲ್ಲ.

ಆರಂಭದಲ್ಲಿ ಮೂರು ವರ್ಷದ ಒಪ್ಪಂದವಿತ್ತು. ಈಗ ಮತ್ತೆ ಒಪ್ಪಂದವನ್ನು 2024 ರವರೆಗೆ ವಿಸ್ತರಿಸಲಾಗಿದೆ. ಈ ಒಪ್ಪಂದದಂತೆ ಐಐಎಚ್‌ಆರ್ ಖರೀದಿಸಿದ ಮರದ ಟೊಂಗೆಗಳನ್ನು ಕರಾವಳಿಯ ಕಸಿ ತಜ್ಞ ಗುರುರಾಜ ಗಿಡ ಮಾಡಿ ಕೊಡುತ್ತಿದ್ದಾರೆ. ವಾರ್ಷಿಕವಾಗಿ ಸುಮಾರು 20,000 ಗಿಡಗಳನ್ನು ತಲಾ 150 ರು.ಗೆ ಐಐಎಚ್‌ಆರ್ ಮಾರಾಟ ಮಾಡುತ್ತಿದೆ.

ಮರಕ್ಕೆ ಸಿಸಿಟೀವಿ ಕಣ್ಗಾವಲು

ಗುಬ್ಬಿ ತಾಲೂಕಿನ ಸೀಗೆಹಳ್ಳಿಯಲ್ಲಿರುವ ಈ ಹಲಸಿನ ಮರಕ್ಕೆ ಈಗ 40 ವರ್ಷ. ರೈತ ಸಿದ್ದಪ್ಪ ಎಂಬುವರು ಇದನ್ನು ಸಂರಕ್ಷಿಸಿದ್ದು, ಅದಕ್ಕೆ 'ಸಿದ್ದು' ಹಲಸು ಎಂದೇ ನಾಮಕರಣ ಮಾಡಲಾಗಿದೆ. ಈ ಮರದ ಹಣ್ಣು ಕೆಂಬಣ್ಣ ಹಾಗೂ ಹೊಳಪಿನಿಂದ ಕೂಡಿದ ದೊಡ್ಡ ಸೊಳೆಗಳನ್ನು ಹೊಂದಿದೆ. ಒಂದು ಹಲಸಿನ ಹಣ್ಣು 6ರಿಂದ 8 ಕೇಜಿ ತೂಕವಿದ್ದು, 25ರಿಂದ 30 ಸೊಳೆಗಳಿರುತ್ತವೆ. ಈ ತಳಿಗೆ 2017ರಲ್ಲಿ ರೈತನ ಹೆಸರಿನಲ್ಲೇ ಮಾನ್ಯತೆ ದೊರೆತಿದೆ. ಮಾನ್ಯತೆ ಪಡೆದ ಮೊದಲ ಹಲಸು ತಳಿ ಎನಿಸಿಕೊಂಡಿದೆ. ಈ ಮರದ ಕಸಿ ಗಿಡಗಳ ಮಾರಾಟ ಮಾಡುವ ಮೂಲಕ 25 ಲಕ್ಷ ರು. ಗಳಿಸಲಾಗುತ್ತಿದೆ ಎಂದು ಸಿದ್ದಪ್ಪ ಅವರ ಪುತ್ರ ಪರಮೇಶ್ ಹೇಳುತ್ತಾರೆ. ಹೊರರಾಜ್ಯಗಳಲ್ಲೂ ಗಿಡಕ್ಕೆ ಬೇಡಿಕೆ ಇದ್ದು, ಮರಕ್ಕೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ!

11-10-2021
Kp Pg 04

ಕಬ್ಬಿಗೆ ಬೆಲೆ, ಬೆಟ್ಟದಷ್ಟು ನಿರೀಕ್ಷೆ

■ **ಸುಧೀರ ಕುಂಭೋಜಕರ**

ಯಕ್ಸಂಬಾ(ಬೆಳಗಾವಿ): ಪ್ರಸಕ್ತ ವರ್ಷದ ಪ್ರವಾಹ, ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ನಲುಗಿ ಹೋಗಿರುವ ಗಡಿ ನಾಡು ಬೆಳಗಾವಿ ಜಿಲ್ಲೆಯ ರೈತರು ಈ ವರ್ಷ ಅಳಿದುಳಿದ ಕಬ್ಬಿಗೆ ಉತ್ತಮ ಬೆಲೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ದೀಪಾವಳಿಯಷ್ಟೊತ್ತಿಗೆ ಕಬ್ಬು ನುರಿಸಲು ಕಾರ್ಖಾನೆಗಳು ಸಜ್ಜಾಗುತ್ತಿದ್ದು ಈ ವರ್ಷದ ಬೆಲೆಯ ಕಡೆ ರೈತರು ಮುಖ ಮಾಡಿದ್ದಾರೆ.

2019ರಲ್ಲಿ ಕಟಾವಿಗೆ ಬಂದ ಕಬ್ಬು ಕೃಷ್ಣಾ ಮತ್ತು ದೂಧಗಂಗಾ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ರೈತರಿಗೆ ಕೋಟ್ಯಾಂತರ ರೂ ಹಾನಿ ಮಾಡಿತ್ತು. ಅದೇ ರೀತಿ ಪ್ರಸಕ್ತ ಸಾಲಿನಲ್ಲೂ ಚಿಕ್ಕೋಡಿ-ನಿಪ್ಪಾಣಿ ತಾಲೂಕಿನಲ್ಲಿ ಕಳೆದ ಸಾಲಿನಲ್ಲಿ 41,235 ಹೆಕ್ಟರ್‌ನಲ್ಲಿ ಪ್ರವಾಹದಿಂದಾಗಿ 10,800 ಹೆಕ್ಟರ್ ನಾಶವಾಗಿದೆ. ಇದರಿಂದಾಗಿ ಕಬ್ಬು ಬೆಳೆಗಾರರು ಕಂಗಾಲಾಗಿದ್ದಾರೆ.

ಕೇಂದ್ರ ಸರಕಾರ ನಿಗದಿಪಡಿಸಿರುವ ಎಫ್.ಆರ್.ಪಿಯಲ್ಲಿ ಕೇವಲ 50 ರೂಪಾಯಿ ಮಾತ್ರ ಹೆಚ್ಚಿಸಿದೆ. ಕೇಂದ್ರ ಮಂತ್ರಿ ಮಂಡಳದನಿರ್ಣಯದಂತೆ ಈ ವರ್ಷ ನುರಿಸುವ ಕಬ್ಬಿಗೆ 10 ಇಳುವರಿ ಇರುವ ಕಬ್ಬಿಗೆ 2900 ರೂ. ಗೊತ್ತುಪಡಿಸಿದ್ದಾರೆ. ಉತ್ಪಾದನೆ ವೆಚ್ಚದ ವಿಚಾರ ಮಾಡದೇ ಕೇಂದ್ರ ಸರಕಾರ ತೆಗೆದುಕೊಂಡ ಈ ನಿರ್ಣಯದಿಂದ ಕಬ್ಬು ಬೆಳೆಗಾರ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬ ಆರೋಪ ರೈತರಿಂದ ಕೇಳಿಬರುತ್ತಿದೆ.

ಚಿಕ್ಕೋಡಿ ತಾಲೂಕಿನಲ್ಲಿ ಉತ್ಪಾದಿಸಿದ ಕಬ್ಬು ತಾಲೂಕಿನ ಚಿಕ್ಕೋಡಿ, ಬೇಡಕಿಹಾಳ, ನಿಪ್ಪಾಣಿ ಮತ್ತು ಜೈನಾಪುರ, ರಾಯಬಾಗ ತಾಲೂಕಿನ ಯಡ್ರಾಂವ, ಅಥಣಿ ತಾಲೂಕಿನ ಶಿರಗುಪ್ಪಿ, ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ ಮತ್ತು ಸಂಕೇಶ್ವರ ಹಾಗೂ ಮಹಾರಾಷ್ಟ್ರದ ಗಡಿಭಾಗದ ಟಾಕಳಿ, ಹುಪರಿ, ಇಚಲಕರಂಜಿ, ಶಿರೋಳ, ಕಾಗಲ ಮತ್ತು ಹಮಿದವಾಡ ಹೀಗೆ 14 ಕಾರ್ಖಾನೆಗಳಿಗೆ ಕಬ್ಬು ಸಾ ಗಾ ಣೆ ಯಾಗುತ್ತಿದೆ. ರಾಜ್ಯದ ಗಡಿಭಾಗದ ರೈತರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳ ಸದಸ್ಯತ್ವ ಹೊಂದಿದ್ದರಿಂದ ಕಬ್ಬು ಮಹಾರಾಷ್ಟ್ರದ ಗಡಿ ಕಾರ್ಖಾನೆಗಳಿಗೆ ಶೇ.40 ರಷ್ಟು ಕಬ್ಬು ಸಾಗನೆಯಾಗುತ್ತದೆ.

ರಾಜ್ಯದ ಗಡಿಭಾಗದ ಸಕ್ಕರೆ ಕಾರ್ಖಾನೆಗಳು 2020-21ನೇ ಸಾಲಿನ ಕಬ್ಬಿಗೆ ಸರಾಸರಿ ಪ್ರತಿ ಟನ್ನಿಗೆ 2700 ರೂ. ದಿಂದ 2755 ರೂ. ದರ ನೀಡಿದ್ದರೆ ನೆರೆಯ ಮಹಾರಾಷ್ಟ್ರ ರಾಜ್ಯದ ಗಡಿಯ ಕಾರ್ಖಾನೆಗಳು ಪ್ರತಿ ಟನ್ನಿಗೆ 2840 ರಿಂದ 3040 ರೂ.ವರೆಗೆ ನೀಡಿವೆ. ಬಹುತೇಕ ಸಕ್ಕರೆ ಕಾರ್ಖಾನೆಗಳು ಸಚಿವರು, ಸಂಸದರು, ಶಾಸಕರ ಕೈಯಲ್ಲಿದ್ದು ರೈತರಿಗೆ ವೈಜ್ಞಾನಿಕ ಬೆಲೆ ನೀಡಿ ಸಹಕರಿಸುತ್ತಾರೊ ಎಂಬುದನ್ನು ಕಾದು ನೋಡಬೇಕಿದೆ. ಇಥೇನಾಲ್, ಮದ್ಯಾರ್ಕ, ವಿದ್ಯುತ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚಿನ ಲಾಭ ಬರುತ್ತದೆ. ಕಾರ್ಖಾನೆಯವರೂ ಸಹ ಕಬ್ಬು ಉತ್ಪಾದಕರ ಹಿತಕಾಪಡಬೇಕಿದೆ ಎಂದು ರೈತರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಬೆಲ್ಲ-ಸಕ್ಕರೆ ತುಟ್ಟಿಯಾಗುತ್ತಲೆ ಇದೆ. ಆದರೆ ಸಕ್ಕರೆ ಸಾಮ್ರಾಟರ ಕುತಂತ್ರದಿಂದ ಕಬ್ಬಿಗೆ ಮಾತ್ರ ಬೆಲೆ ಇಲ್ಲದಂತಾಗಿದೆ.

ಸಕ್ಕರೆ ಕಾರ್ಖಾನೆಗಳು ಪ್ರಸಕ್ತ ಸಾಲಿನ ಕಬ್ಬು ನುರಿಯುವ ಹಂಗಾಮನ್ನು ಪ್ರಾರಂಭಿಸಲು ಸಜ್ಜಾಗಿದ್ದು ಸೂಕ್ತ ಬೆಲೆ ನಿಗದಿಪಡಿಸಿ ನಂತರವೇ ಕಾರ್ಖಾನೆ ಪ್ರಾರಂಭಿಸಬೇಕು. ರೈತರು ತೀವ್ರ ಸಂಕಷ್ಟದಲ್ಲಿದ್ದು ಉತ್ತಮ ಬೆಲೆ ನೀಡಿ ಅವರ ನೆರವಿಗೆ ಬರಬೇಕು.

■ **-ಮಂಜುನಾಥ ಪರಗೌಡರ**
ಹಸಿರು ಸೇನೆ ಅಧ್ಯಕ್ಷ, ಚಿಕ್ಕೋಡಿ

11-10-2021
Sk Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in